ಅಧ್ಯಕ್ಷರು:– ಮಂತ್ರಿಗಳೆ, ನಾವು ಮಲೆನಾಡಿನಿಂದ ಬಂದಿದ್ದೇವೆ. ಗುಡ್ಡಗಾಡಿನಲ್ಲಿದ್ದೇವೆ. ಏನು ಮಾಡುವುದಕ್ಕೆ ಆಗುತ್ತದೆ? ಆ ಪ್ರದೇಶದಿಂದ ಮುಖ್ಯ ನಗರಕ್ಕೆ ಬರಬೇಕಾಗುತ್ತದೆ. ಈ ಸೌಲಭ್ಯವನ್ನು ನಷ್ಟವೋ ಲಾಭವೋ ಕೊಡುವ ಸಂದರ್ಭದಲ್ಲಿ ಕೊಡಲೇಬೇಕಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಒಪ್ಪಿಕೊಳ್ಳುತ್ತೇನೆ. ತಾವು ಹೇಳುವ ವಿಚಾರ ಸಂಪೂರ್ಣವಾಗಿ ಒಪ್ಪುವಂತಹದ್ದು. ಆದರೆ, 12 passengers ಸಿಗುತ್ತಾರೆ. ಗರಿಷ್ಟ 12 passengers ಸಿಗುತ್ತಿದ್ದಾರೆ. ಇನ್ನೊಮ್ಮೆ ಸಮೀಕ್ಷೆ ಮಾಡಿಸುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:– ಸರಿಯಲ್ಲ ಇದು. ಈಗ ಹೊಸದಾಗಿ ಇದನ್ನು ಮಾಡಿದ್ದಲ್ಲ. 10–12 ವರ್ಷಗಳಿಂದ ಓಡಿದ್ದನ್ನು ಇಲ್ಲ ಎಂದರೆ ಹೇಗೆ?

4. ವಿಷಯ: ಹೊಳೆನರಸೀಪುರ ಪಟ್ಟಣದಲ್ಲಿರುವ ಸರ್ಕಾರಿ ಕಾನೂನು ಕಾಲೇಜಿನಲ್ಲಿ 3 ಮತ್ತು 5ನೇ ವರ್ಷದ ಕಾನೂನು ಪದವಿ ಪ್ರಾರಂಭಿಸಲು ಅನುಮತಿ ದೊರಕಿಸಿ ಕೊಡುವ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರ ಗಮನ ಸೆಳೆಯುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಅಧ್ಯಕ್ಷರೆ, ಹೊಳೆನರಸೀಪುರ ಪಟ್ಟಣದಲ್ಲಿರುವ ಸರ್ಕಾರಿ ಕಾನೂನು ಕಾಲೇಜಿನಲ್ಲಿ 3 ಮತ್ತು 5ನೇ ವರ್ಷದ ಕಾನೂನು ಪದವಿ ಪ್ರಾರಂಭಿಸಲು ಅನುಮತಿ ದೊರಕಿಸಿಕೊಡುವ ಬಗ್ಗೆ ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ರಾಜ್ಯದಲ್ಲಿ 2009 ರಲ್ಲಿ ಸ್ಥಾಪನೆಯಾಗಿದ್ದು, ಅದರ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟು 93 ಕಾನೂನು ಕಾಲೇಜುಗಳು ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿವೆ. ಹೊಳೆನರಸೀಪುರ ಸರ್ಕಾರಿ ಕಾನೂನು ಕಾಲೇಜು ಪ್ರಾರಂಭವಾದಾಗಿನಿಂದಲೂ 5 ವರ್ಷದ ಬಿ.ಎ.ಎಲ್.ಎಲ್.ಬಿ. ಕೋರ್ಸು ಚಾಲನೆಯಲ್ಲಿರುತ್ತದೆ. ಇದಲ್ಲದೆ, ಹೊಳೆನರಸೀಪುರ ಸರ್ಕಾರಿ ಕಾನೂನು ಕಾಲೇಜಿಗೆ 3 ವರ್ಷದ ಎಲ್.ಎಲ್.ಬಿ ಕೋರ್ಸು ಪ್ರಾರಂಭಿಸಲು ಸಂಖ್ಯೆ: ಲಾ 22 ಕೆಎಲ್ಎಂ 2015, ದಿನಾಂಕ: 04.03.2015ರ ಸರ್ಕಾರದ ಪತ್ರದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ:

Conditions:-

1. Capitation fee in any form should not be collected.
2. The College shall not infringe upon the norms and standards prescribed by the BCI, Karnataka State Law University and the Government from time to time.
3. Admission of students shall be strictly in accordance with the regulations of the Karnataka State Law University and the BCI.
4. The Principal and teaching staff of the College shall possess the requisite qualifications in law as stipulated by the Bar Council of India. The college shall not make any admissions of start imparting education in law before obtaining approval from the BCI as prescribed in Rule 14(1), (2) and (3) (Rules of Legal Education, Chapter III of Part IV) of the Bar Council of India Rules.

5. Before admitting students to a course the college, shall send a copy of the approval documents issued to it by the BCI, to the Secretary to Government, Department of Law Justice and Human Rights and the Registrar, Karnataka State Law University , Deviation of any sort will be viewed seriously and Government retains the right to unilaterally cancel the permission granted to the college.

6 The College should follow the Statutes/Rules/Regulation and Orders passed by the Karnataka State Law University from time to time in the interest of Students/Teacher/other employees of the College. The College should, under no circumstance, violate the eligibility criteria of exceed the intake of students prescribed in the affiliation orders of the University and shall fulfil all the conditions imposed by the LIC.

7. The college should follow the rules of the University in admitting 50% of the students under University quota (wherever applicable) with the fees fixed by the University from time to time without charging any fee or amount over and above the fees fixed by the University.

8. The management of the College has to note the Supreme Court order dated: 13.8.1997 in Visakha –Vs- State of Rajasthan with regard to any act of violence or sexual harassment of women at College/Work place by any student/person including faculty which is a cognizable offence Indulgence in such activities shall render liable for

cancellation of admission and also render liable for punishment of such student/person. Further the College/ Management should undertake to establish a complaints Committee for the abatement of the above offence as per the directions of the Supreme Court.

9. The College shall undertake to conduct the courses to the best advantage of the students development. The Principal/ Management should treat the Students/Teaching community courteously during their stay in the college.
10. The College shall not withhold the marks cards/ transfer certificates and other documents of the students unnecessarily and no additional amount, save for the fees prescribed by the University shall be demanded for the same.
11. The College, before seeking the approval of the Bar Council of India, Shall have a minimum capital fund of Rupees Ten lakh to be kept a in Bank account in order to be used for any future exigencies and development of the college. The account is to be jointly operated by the principal of the college with the Registrar of the University or his authorized agent.
12. Roster System (wherever applicable) should be followed at the time of admission of students.
13. All guidelines issued by the Hon'ble Supreme Court, University Grant Commission. Ministry of Human Resource Development, Karnataka State Government and other stakeholders about measures to avoid the ragging menace in colleges should be strictly implemented

ಮೇಲ್ಕಂಡ ಆದೇಶದ ಮಾರ್ಗಸೂಚಿಗಳನ್ವಯ ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯರವರು ದಿನಾಂಕ: 25.04.2015 ರಂದು ಸಂಯೋಜನೆ ಆದೇಶ (Affiliation Order) ವನ್ನು ಹೊರಡಿಸುವ ಮೂಲಕ ಭಾರತೀಯ ವಕೀಲರ ಮಂಡಳಿಯ ಪರವಾನಿಗೆ ನೀಡಲು ಕೋರಲಾಗಿರುತ್ತದೆ.

ಈ ಸಂಬಂಧದಲ್ಲಿ ಹೊಳೆನರಸೀಪುರ ಸರ್ಕಾರಿ ಕಾನೂನು ಮಹಾವಿದ್ಯಾಲಯವು ಭಾರತೀಯ ವಕೀಲರ ಮಂಡಳಿಯ ಪರವಾನಿಗೆ ಪಡೆಯಲು ಅರ್ಜಿಯನ್ನು ಸಲ್ಲಿಸಿದ್ದು, ಕಾನೂನು ವಿಶ್ವವಿದ್ಯಾಲಯದಿಂದ ದಿನಾಂಕ: 11.05.2015 ರಂದು ಭಾರತೀಯ ವಕೀಲರ ಮಂಡಳಿಗೆ ಪತ್ರವನ್ನು ಬರೆಯಲಾಗಿದೆ. ಭಾರತೀಯ ವಕೀಲರ ಮಂಡಳಿಯ ಪರವಾನಿಗೆ ದೊರೆತ ಕೂಡಲೇ ಹೊಳೆನರಸೀಪುರ ಸರ್ಕಾರಿ ಕಾನೂನು ಮಹಾವಿದ್ಯಾಲಯದಲ್ಲಿ 3 ವರ್ಷದ ಎಲ್.ಎಲ್.ಬಿ. ಕೋರ್ಸ್‌ಗೆ ಸಂಬಂಧಿಸಿದಂತೆ ಅಧಿಸೂಚನೆ (Affiliation Notification) ಯನ್ನು ಕಾನೂನು ವಿಶ್ವವಿದ್ಯಾಲಯದಿಂದ ಹೊರಡಿಸಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರನ್ನು ಕೇಳುತ್ತೇನೆ. ಹೊಳೆನರಸೀಪುರ ಪಟ್ಟಣದಲ್ಲಿರುವ. . . ಸರ್ ಒಂದು ನಿಮಿಷ ಹೇಳಿಬಿಡುತ್ತೇನೆ.

ಅಧ್ಯಕ್ಷರು:– ಬೇಡ ಹೇಳುತ್ತಾರೆ ಇರ್ರಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಸಂಪೂರ್ಣವಾಗಿ ಉತ್ತರ ಕೊಟ್ಟಿದ್ದೇನೆ. ಆಮೇಲೆ ಖಾಸಗಿಯಾಗಿಯೂ ಕೂಡ ಚರ್ಚೆ ಮಾಡಿದ್ದೇನೆ. ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಜಯಚಂದ್ರರವರೆ, ಎರಡೇ ನಿಮಿಷ ಹೇಳುತ್ತೇನೆ. 2009ರಲ್ಲಿ ಪ್ರಾರಂಭವಾಯಿತು ಸರ್.

ಅಧ್ಯಕ್ಷರು:– ಅದು ಯಾವಾಗ ಬೇಕಾದರೂ ಆಗಲಿ ರೀ. ನೀವು ಕೇಳಿರುವ ಪ್ರಶ್ನೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ:– ಮೂಲಭೂತ ಸೌಲಭ್ಯ ಹಾಗೂ buildıngs . .

ಅಧ್ಯಕ್ಷರು:– ಅದಕ್ಕೂ ಇದಕ್ಕೂ ಸಂಬಂಧವಿದೆಯೇ? ನೀವು ಕೇಳಿರುವ ಪ್ರಶ್ನೆಗೂ ಇದಕ್ಕೂ ಸಂಬಂಧವಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ:– ಮೂರು ವರ್ಷದ ಕಾಲೇಜೂ ಇದೆ ಸರ್. ಇದರಲ್ಲಿ ಎರಡು ಇದೆ ಸರ್.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಪ್ರಾರಂಭ ಮಾಡುತ್ತೇವೆ. Notification ಹೊರಡಿಸುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ವಾರಕ್ಕೆ ಒಂದು ದಿನ ತಮ್ಮಿಂದ ಒಂದು ಲೆಟರ್ ಹಾಕಬೇಕು. ಬಂದು inspection ಮಾಡಿ ಎಂದು ಲೆಟರ್ ಹಾಕಬೇಕು.

ಅಧ್ಯಕ್ಷರು: ಆಯಿತು ಹಾಕ್ರಿ.

ಶ್ರೀ ಟಿ.ಬಿ. ಜಯಚಂದ್ರ:– ಖಂಡಿತವಾಗಿ ಮಾಡುತ್ತೇವೆ. ನಾನು ಈಗಾಗಲೇ ಅದಕ್ಕೆ ಸಂಬಂಧಪಟ್ಟವರ ಹತ್ತಿರ ಮಾತನ್ನೂ ಆಡಿದ್ದೇನೆ. ದೆಹಲಿಗೆ ಹೋಗಿ ಮಾತನ್ನು ಆಡಿದ್ದೇನೆ. ಆದಷ್ಟು ಬೇಗ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಆಮೇಲೆ ಡೆಸ್ಕ್‌ಗಳು ಮತ್ತು ಪುಸ್ತಕಗಳನ್ನು ಕೊಡಿಸಿಕೊಡಿ.

ಅಧ್ಯಕ್ಷರು:– ಅದು ಸಂಬಂಧವಿಲ್ಲ ಬಿಡ್ರಿ. ಹೇಳ್ರಿ.